# ಹಸ್ತ ರೇಖೆ ಬದಲಿಸಿದ ಬಾಲಕ

## ಅ) ಪದಗಳ ಅರ್ಥ ಬರೆಯಿರಿ.

ಅಭಿರುಚಿ = ಆಸಕ್ತಿ, ಒಲವು

ಗಡುಸು = ಬಿರುಸು

ಛಲ = ಹಟ

ಪೂರೈಸು = ಪೂರ್ಣಮಾಡು

ಬೆಣಚುಕಲ್ಲು = ಹೊಳಪುಳ್ಳ ಚೂಪಾದಕಲ್ಲು

ವಿದ್ಯಾದಾನ = ಶಿಕ್ಷಣ ನೀಡು

ಕಲಕು = ಕದಡು

ಘನತೆ = ಹಿರಿಮೆ

ಪರಿಪರಿ = ವಿವಿಧ ರೀತಿ

ಪ್ರಾಚೀನ = ಹಿಂದಿನ

ಬೇಡು = ವಿನಂತಿಸು

ವಿನೀತ = ಸೌಜನ್ಯ, ವಿಧೇಯ

## ಆ) ಒಂದು ವಾಕ್ಯದಲ್ಲಿ ಉತ್ತರಿಸಿ.

FOR KANNADA
ಕನ್ನಡಕ್ಕಾಗಿ ಇಲ್ಲಿ ಬನ್ನಿ

೧) ಪಾಣಿನಿ ಯಾವ ಭಾಷೆಯಲ್ಲಿ ವ್ಯಾಕರಣ ರಚಿಸಿದ್ದಾನೆ?

ಉ: ಪಾಣಿನಿ ಸಂಸ್ಕೃತ ಭಾಷೆಯಲ್ಲಿ ವ್ಯಾಕರಣ ರಚಿಸಿದ್ದಾನೆ.

೨) ಪಾಣಿನಿಯ ಗುರುವಿನ ಹೆಸರೇನು?

ಉ: ಪಾಣಿನಿಯ ಗುರುವಿನ ಹೆಸರು ಉಪಪರ್ವ.

೩) ಬಾಲಕ ಕೈಯಲ್ಲಿ ವಿದ್ಯಾರೇಖೆಯನ್ನು ಯಾವುದರಿಂದ ಮೂಡಿಸಿಕೊಂಡನು?

ಉ: ಬಾಲಕ ಕೈಯಲ್ಲಿ ವಿದ್ಯಾರೇಖೆಯನ್ನು ಚೂಪಾದ ಬೆಣಚು ಕಲ್ಲಿನಿಂದ ಮೂಡಿಸಿಕೊಂಡನು.

೪) ಗುರುಗಳು ಬಾಲಕನ ಕೈನೋಡಿ ಏನೆಂದು ಹೇಳಿದರು?

ಉ: ಗುರುಗಳು ಬಾಲಕನ ಕೈನೋಡಿ "ಇವನ ಕೈಯಲ್ಲಿ ವಿದ್ಯಾರೇಖೆ ಇಲ್ಲ, ಇವನಿಗೆ ವಿದ್ಯೆ ಹತ್ತುವದಿಲ್ಲ" ಎಂದು ಹೇಳಿದರು.

೫) ತಾಯಿ ದಕ್ಷಿ ಗುರುಗಳಲ್ಲಿ ಏನೆಂದು ಬೇಡಿಕೊಂಡಳು?

ಉ: ತಾಯಿ ದಕ್ಷಿ ಗುರುಗಳಲ್ಲಿ ವಿದ್ಯಾದಾನ ಮಾಡುವಂತೆ ಬೇಡಿಕೊಂಡಳು.

೬) ಮಕ್ಕಳು ತಕ್ಷಶಿಲೆಯಲ್ಲಿ ಓದಬೇಕೆಂದು ತಂದೆತಾಯಿಗಳು ಏಕೆ ಆಸೆಪಡುತ್ತಾರೆ?

ಉ: ಮಕ್ಕಳು ತಕ್ಷಶಿಲೆಯಲ್ಲಿ ಓದಿ ವಿದ್ಯಾವಂತರಾಗಬೇಕೆಂದು ತಂದೆತಾಯಿಗಳು ಆಸೆಪಡುತ್ತಾರೆ.

೭) ಪ್ರಾಚೀನ ಭಾರತದ ಅತಿದೊಡ್ಡ ಗುರುಕುಲ ಯಾವುದು?

ಉ: ಪ್ರಾಚೀನ ಭಾರತದ ಅತಿದೊಡ್ಡ ಗುರುಕುಲ ತಕ್ಷಶಿಲೆ.

**ಇ) ಎರಡು – ಮೂರು ವಾಕ್ಯಗಳಲ್ಲಿ ಉತ್ತರಿಸಿರಿ.**

೧) ಗುರುಗಳು ಪಾಣಿನಿಗೆ ವಿದ್ಯೆ ಕಲಿಸಲು ಏಕೆ ನಿರಾಕರಿಸಿದರು?

ಉ:ಪಾಣಿನಿಯ ಕೈಯಲ್ಲಿ ವಿದ್ಯಾರೇಖೆ ಇರಲಿಲ್ಲ. ಅದಕ್ಕೆ ಗುರುಗಳು ಪಾಣಿನಿಗೆ ವಿದ್ಯೆ ಕಲಿಸಲು ನಿರಾಕರಿಸಿದರು.

FOR KANNADA
ಕನ್ನಡಕ್ಕಾಗಿ ಇಲ್ಲಿ ಬನ್ನಿ

೨) ಬಾಲಕ ತನ್ನ ಕೈಯಲ್ಲಿ ವಿದ್ಯಾರೇಖೆಯನ್ನು ಹೇಗೆ ಮೂಡಿಸಿಕೊಂಡನು?

ಉ:ಬಾಲಕ ಬೆಣಚು ಕಲ್ಲಿನಿಂದ ಕೈಯನ್ನು ಕೊರೆದುಕೊಂಡನು. ರಕ್ತ ಸುರಿಯಿತು. ಹೀಗೆ ಬಾಲಕ ತನ್ನ ಕೈಯಲ್ಲಿ ವಿದ್ಯಾರೇಖೆಯನ್ನು ಮೂಡಿಸಿಕೊಂಡನು.

೩) ಗುರುಗಳು ಪಾಣಿನಿಗೆ ವಿದ್ಯೆ ಕಲಿಸಲು ಏಕೆ ಮನಸ್ಸು ಮಾಡಿದರು?

ಉ:ರಕ್ತ ಸುರಿಯುತ್ತಿರುವ ಬಾಲಕನ ಕೈ ನೋಡಿ ಗುರುಗಳ ಮನಸ್ಸು ಕರಗಿತು. ಅವನ ವಿದ್ಯೆ ಕಲಿಯುವ ಛಲ ನೋಡಿ ಗುರುಗಳು ಪಾಣಿನಿಗೆ ವಿದ್ಯೆ ಕಲಿಸಲು ಮನಸ್ಸು ಮಾಡಿದರು.

೪) ಪಾಣಿನಿ ಜಗತ್ ಪ್ರಸಿದ್ಧನಾದುದು ಹೇಗೆ?

ಉ:ಪಾಣಿನಿ ಹೊಸ ವಿಚಾರಗಳನ್ನು ಹೇಳಿದ. ಸಂಸ್ಕೃತ ಭಾಷೆಗೆ ವ್ಯಾಕರಣ ರಚಿಸಿದನು. ಹೀಗೆ ಪಾಣಿನಿ ಜಗತ್ ಪ್ರಸಿದ್ಧನಾದನು.

**ಈ) ಯಾರು ಯಾರಿಗೆ ಹೇಳಿದರು?**

೧) "ಅವನ ಕೈಯಲ್ಲಿ ವಿದ್ಯಾರೇಖೆಯಿಲ್ಲ, ಅವನಿಗೆ ವಿದ್ಯೆ ಹತ್ತುವದಿಲ್ಲ"

ಈ ಮಾತನ್ನು ಗುರುಗಳು ತಾಯಿ ದಕ್ಷಿಗೆ ಹೇಳಿದರು.

೨) "ಇಗೋ ನೋಡು ಇದು ವಿದ್ಯಾರೇಖೆ"

ಈ ಮಾತನ್ನು ಗುರುಗಳು ಪಾಣಿನಿಗೆ ಹೇಳಿದರು.

೩) "ಗುರುಗಳೇ ನನ್ನ ಕೈಯಲ್ಲಿ ವಿದ್ಯಾರೇಖೆ ಮೂಡಿದೆ ನೋಡಿ"

ಈ ಮಾತನ್ನು ಪಾಣಿನಿ ಗುರುಗಳಿಗೆ ಹೇಳಿದನು.

**ಉ) ಬಿಟ್ಟ ಸ್ಥಳ ತುಂಬಿರಿ.**

FOR KANNADA

೧) ಪ್ರಾಚೀನ ಭಾರತದ ಅತಿ ದೊಡ್ಡ ಗುರುಕುಲ **ತಕ್ಷಶಿಲೆ** ಆಗಿತ್ತು.

೨) ಪಾಣಿನಿಯು **ಕ್ರಿ ಪೂ ೬ನೇಯ** ಶತಮಾನದಲ್ಲಿ ಬದುಕಿದ್ದನು.

೩) ಪಾಣಿನಿಯ ತಾಯಿಯ ಹೆಸರು **ದಕ್ಷಿ.**

೪) ಬಾಲಕನು ಬೆಣಚು ಕಲ್ಲಿನಿಂದ ತನ್ನ ಕೈ ಮೇಲೆ **ವಿದ್ಯಾರೇಖೆ** ಕೊರೆದುಕೊಂಡನು.

**ಊ) ಸ್ವಂತ ವಾಕ್ಯದಲ್ಲಿ ಬಳಸಿ**

ಪ್ರಾಚೀನ: ಹಂಪೆ ಒಂದು ಪ್ರಾಚೀನ ನಗರ.

ಅಭಿರುಚಿ: ನನಗೆ ನೃತ್ಯದಲ್ಲಿ ಅಭಿರುಚಿ ಇದೆ.

ಪೂರೈಸು: ಕಾವೇರಿ ನದಿ ಮೈಸೂರಿಗೆ ನೀರನ್ನು ಪೂರೈಸುತ್ತದೆ.

ವಿನೀತ : ನಾವು ನಮ್ಮ ತಂದೆ ತಾಯಿಯರಿಗೆ ವಿನೀತರಾಗಿರಬೇಕು.

ಪರಿಪರಿ : ನಾವು ಕೊರೋನ ತೊಲಗಲಿ ಎಂದು ಪರಿಪರಿಯಾಗಿ ಬೇಡಿಕೊಂಡೆವು.